




ಅರುಣ ಪಿ. ಭಟ್ಟ


## ವಾರಭವಿಷ್ಯ: 12.03.2020ರಿಂದ 18.03.2020ರವರೆಗೆ




ನಿರೀಕ್ಷಿಸಿದ ಮಕ್ಕಳ ಕೆಲಸದ ಸಮಸ್ಯೆ ಬಗೆಹರಿಯುವುದು. ಸರ್ಕಾರದಿಂದ ಬರುವ ಹಣ ಸಕಾಲಕ್ಕೆ ಬರುವುದು. ಸಂಘ ಸಂಸ್ಥೆಗಳಿಂದ ನಿರೀಕ್ಷಿತ ಲಾಭವಿದೆ. ವ್ಯಾಪಾರಸ್ಥರಿಗೆ ಉತ್ತಮ ಲಾಭ. ವಾರಾಂತ್ಯದಲ್ಲಿ ಅನಿರೀಕ್ಷಿತ ಜನವಿರೋಧ.

ಶುಭದಿನ. 15. ಆದಿತ್ಯ ಹೃದಯ ಪಠಿಸಿರಿ.




ವಾಹನ ಖರೀದಿಯಲ್ಲಿ ಜಾಗ್ರತೆ ವಹಿಸಿ. ಸಾಮಾಜಿಕವಾಗಿ ಪ್ರಗತಿ ಸಾಧಿಸುವಿರಿ ಲೇಖಕರಿಗೆ ಶುಭವಾರ್ತೆ ಆರೋಗ್ಯ ಸುಧಾರಣೆ. ವಿವಾಹಾಪೇಕ್ಷಿಗಳಿಗೆ ಉತ್ತಮ ಅವಕಾಶ. ಹೊಸಮನೆ ಕೆಲಸಗಳು ಅಭಾಧಿತವಾಗಿ ನಡೆಯುತ್ತದೆ.

ಶುಭದಿನ 14. ವಿಷ್ಣು ಸಹಸ್ರನಾಮ ಸ್ತೋತ್ರ ಪಠಿಸಿರಿ.




ಪ್ರಾರಂಭದಲ್ಲಿ ಕಾಲುನೋವು ಉಲ್ಬಣಗೊಳ್ಳುವುದು. ನಂತರ ಆಗಮನದಿಂದ ಮಹತ್ವದ ಚರ್ಚೆ ಫಲಪ್ರದ. ಸಹೋದರರ ನೈಜಮುಖದ ಪರಿಚಯವಾಗುವುದು. ಕೆಲಸದವರಿಂದ ಸಹಾಯ. ಖರೀದಿ ವಿಕ್ರಿಯಲ್ಲಿ ಲಾಭ.

ಶುಭದಿನ 18. ನಾಗ ಪ್ರತಿಮಾ ಪೂಜೆ ಮಾಡಿರಿ.




ಅಸಭ್ಯ ಜನರ ಕುಟುಂಬ ಪ್ರವೇಶದಿಂದ ಕಿರಿಕಿರಿ ತಂದೆಯೊಡನೆ ಮನಸ್ತಾಪ ಸಾಧ್ಯತೆ. ವಾಹನ ದುರಸ್ತಿ ಕಾರ್ಯ ಇಲ್ಲವೆ ವಾಹನ ಬದಲಾಯಿಸುವ ಸಾಧ್ಯತೆ. ಕೃಷಿಮೂಲದಿಂದ ಧನಲಾಭ. ಸಾಮಾಜಿಕ ಯಶಸ್ಸು.

ಶುಭದಿನ 17. ಲಕ್ಷ್ಮೀ ನರಸಿಂಹ ಸ್ತೋತ್ರ ಪಠಿಸಿರಿ.




ವಾರದ ಪ್ರಾರಂಭದಲ್ಲಿ ಮಾನಸಿಕ ಸ್ವಾಸ್ಥ್ಯ ಕೆಡುವ ಘಟನೆ ಜರುಗುವುದು. ಹೊಟ್ಟೆ ನೋವಿನ ಉಪದ್ರವಗಳು ಕಾಣಿಸಲಿವೆ. ಅವಮಾನಕರ ಪ್ರಸಂಗ ಬರಬಹುದು. ದೈಹಿಕ ಆರೋಗ್ಯ ಚೆನ್ನಾಗಿರುವುದು. ಅಧಿಕಾರಿಗಳಿಂದ ಪ್ರಶಂಸೆ.

ಶುಭದಿನ 14. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಹಲವು ಖರ್ಚುಗಳು ಮೇಳೈಸಿ ಬರಲಿವೆ. ಅನೀರಿಕ್ಷಿತ ಪ್ರವಾಸ ಘಟಿಸುತ್ತದೆ. ವಿವಾಹ ಕಾರ್ಯಕ್ಕೆ ನೆರವಾಗುವದರಿಂದ ಸಂತಸ ಪ್ರಾಪ್ತಿ. ಆಳುಕಾಳುಗಳು ಕೈಕೊಡಬಹುದು. ಕೌಟುಂಬಿಕ ಸುವಾರ್ತೆ.

ಶುಭದಿನ 16. ಲಕ್ಷ್ಮೀ ನಾರಾಯಣ ಹೃದಯ ಪಠಿಸಿರಿ.




ಎಲ್ಲ ಮೂಲಗಳಿಂದ ಧನಲಾಭ. ಜೀವನದ ಮಹತ್ವಾಕಾಂಕ್ಷೆ ಪೂರ್ಣಗೊಳ್ಳುವ ಸಮಯ. ಹಳೆಯ ಮಿತ್ರರು ಜೊತೆಯಾಗುವರು. ಸಂತಸ ಸಮಾರಂಭಕ್ಕಾಗಿ ಖರ್ಚು. ಹೊಸ ವಿವಾಹಿತರಿಗೆ ಸಂತಾನ ಪ್ರಾಪ್ತಿ.

ಶುಭದಿನ 18. ಸುಬ್ರಹ್ಮಣ್ಯ ಸ್ವಾಮಿಗೆ ಕ್ಷೀರಾಭಿಷೇಕ ಮಾಡಿರಿ.




ಹಲವು ದಿನಗಳಿಂದ ಬಯಸಿದ ಅಧಿಕಾರ ಪ್ರಾಪ್ತಿಯಿಂದ ಸಂತಸ. ವಿಶೇಷ ವಸ್ತ್ರ ಖರೀದಿ ಸಾಧ್ಯತೆ. ಕ್ರೀಡಾಪಟುಗಳಿಗೆ ಉತ್ತಮ ಅವಕಾಶ. ಕೌಟುಂಬಿಕ ಖರ್ಚು ಹಿಡಿತಕ್ಕೆ ಬರುವುದು. ಚಿಕ್ಕ ಪ್ರವಾಸದಿಂದ ಮನೋಲ್ಲಾಸ.

ಶುಭದಿನ 17. ಶನಿಸ್ತೋತ್ರ ಪಠಿಸಿರಿ.




ಬಂಧುಗಳ ಸಹಕಾರದಿಂದ ಸಂಕಟ ಮುಕ್ತಿ. ಪತ್ನಿಯ ಮನೋಕಾಮನೆ ಪೂರ್ಣವಾಗುವುದು. ದೂರಪ್ರವಾಸಕ್ಕೆ ಸಿದ್ಧತೆ. ನಾಗರಿಕರಿಂದ ಪ್ರಶಂಸೆ ನುಡಿ. ನಾಗರಿಕ ಸನ್ಮಾನ. ಸರಕಾರಿ ನೌಕರರಿಗೆ ವರ್ಗಾವಣೆ ಸಾಧ್ಯತೆ.

ಶುಭದಿನ 17. ಕಾಲಭೈರವನ ಸೇವೆ ಮಾಡಿರಿ.




ಹಲವು ತಾಪತ್ರಯಗಳ ನಡುವೆಯೂ ಹಮ್ಮಿಕೊಂಡ ಕಾರ್ಯವನ್ನು ಮಾಡಿ ಮುಗಿಸುವಿರಿ. ಸಹನೆಯಿಂದ ಕೆಲ ಸ್ಥಳಗಳಲ್ಲಿ ವಿಶೇಷ ಜನಪ್ರಿಯತೆಯನ್ನು ಗಳಿಸುವಿರಿ. ಹಾಗಾಗಿ ಬರಬೇಕಾಗಿದ್ದ ಹಣವು ಶೀಘ್ರದಲ್ಲಿ ದೊರೆಯುವುದು.

ಶುಭದಿನ 17. ಆಂಜನೇಯ ಸ್ತೋತ್ರವನ್ನು ತಪ್ಪದೆ ಪಠಿಸಿ.




ಮಕ್ಕಳೊಂದಿಗೆ ಸಮಯ ಕಳೆಯುವುದು ಮುಖ್ಯ. ಕೇವಲ ಒಂದೇ ಒಂದು ಉತ್ತಮ ಕೆಲಸದಿಂದ ಕೆಲಸದಲ್ಲಿ ನಿಮ್ಮ ಶತ್ರುಗಳು ನಿಮ್ಮ ಸ್ನೇಹಿತರಾಗಬಹುದು. ನೀವು ಸಾಕಷ್ಟು ಆಸಕ್ತಿದಾಯಕ ಆಮಂತ್ರಣಗಳನ್ನು ಪಡೆಯುತ್ತೀರಿ.

ಶುಭದಿನ 15. ಹನುಮಾನ್ ಚಾಲೀಸ್ ಓದಿರಿ.




ನಿಮ್ಮ ವೃತ್ತಿ ಜೀವಕ್ಕೆ ಸಂಬಂಧಿಸಿದಂತೆ ಕೆಲಸ ಮಾಡುವಿರಿ. ನಿಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ ಆದರೆ ನಿಮ್ಮ ಖರ್ಚುಗಳು ಜಾಸ್ತಿಯಾಗುವ ಸಾಧ್ಯತೆಯಿರುತ್ತದೆ. ಸ್ನೇಹಿತರು ನಿಜವಾಗಿಯೂ ಈ ಸಂದರ್ಭದಲ್ಲಿ ಸಹಾಯ ಮಾಡುವರು.

ಶುಭದಿನ 14. ರಾಘವೇಂದ್ರ ಸ್ವಾಮಿಗಳ ಆರಾಧನೆ ಮಾಡಿರಿ.


DHEEPAM
LAMP OIL
BLEND OF 5 OILS
ದೀಪದ ಬೆಳಕಲ್ಲಿ
ಒಂದು ದೈವೀಕ
ಅನುಭವ
ಸುಗಂಧ ಸುವಾಸನೆ
ಹರಡುವ ಪಂಚ ದೀಪ ಎಣ್ಣೆ
